ಜ್ಞಾನವನ್ನು ಪಡೆದವನು ಎಂದಿಗೂ ತಪ್ಪುಹೆಜ್ಜೆ ಇಡುವುದಿಲ್ಲ. ನಿನ್ನನ್ನು ತುಂಬಾ ಬುದ್ಧಿವಂತ ಹುಡುಗ ಎಂದುಕೊಂಡಿದ್ದೇನೆ. ನಾನು ಹೇಳಿದ್ದನ್ನೇ ಅನುಸಂಧಾನ ಮಾಡಿದರೆ ನಿನಗೆ ಅರ್ಥ ವಾಗುತ್ತದೆ" ಎಂದು ತಿಳಿಯಹೇಳಿದರು. ಅದರಂತೆಯೇ ಅಭೇದಾನಂದರು ಮೂರು ದಿನಗಳ ಕಾಲ ಚಿಂತನೆ ನಡೆಸಿ, ಅದರ ಅಂತರಾರ್ಥವನ್ನು ಅರಿತುಕೊಂಡರು. ಪರಮಹಂಸರ ಎದುರಿನಲ್ಲಿ ನಿಂತು, "ಮಹಾರಾಜ್, ನಾನೀಗ ಮೀನು ಹಿಡಿಯುವುದು ಏಕೆ ಕೆಟ್ಟದ್ದು ಎಂಬುದನ್ನು ಮನಗಂಡಿದ್ದೇನೆ. ಇನ್ನುಮುಂದೆ ಹಾಗೆ ಮಾಡುವುದಿಲ್ಲ, ದಯವಿಟ್ಟು ನನ್ನನ್ನು ಕ್ಷಮಿಸಿ" ಎಂದು ಕೇಳಿಕೊಂಡರು.

**ಬೆಟ್ಟದ ಗವಿಯಲ್ಲಿ ಯೋಗರಹಸ್ಯ :** ವಿಜಯಕೃಷ್ಣಗೋಸ್ವಾಮಿ ಎಂಬ ಭಕ್ತನೊಬ್ಬನು ಒಂದು ದಿನ ಪರಮಹಂಸರೊಡನೆ ಮಾತ ನಾಡುತ್ತಿರುವಾಗ ನಡುವೆ, "ಮಹಾರಾಜ್, ನಾನು ಗಯಾಕ್ಷೇತ್ರಕ್ಕೆ ಹೋಗಿದ್ದೆ. ಅಲ್ಲಿನ ಬಾರಾಬರ್‌ಬೆಟ್ಟದ ಗವಿಯಲ್ಲಿ ಒಬ್ಬ ಹಠಯೋಗಿಯನ್ನು ಕಂಡು ಮಾತನಾಡಿಸಿಕೊಂಡು ಬಂದೆ, ಅವನೊಬ್ಬ ಅದ್ಭುತವ್ಯಕ್ತಿ" ಎಂದು ಹೇಳಿದನು. ಆ ಮಾತು ಕಿವಿಗೆ ಬೀಳುತ್ತಿದ್ದಂತೆಯೇ ಅಭೇದಾನಂದರು ಹೇಳಕೇಳದೆ ಹೊರಟೇಬಿಟ್ಟರು. ಕಷ್ಟಬಿದ್ದು ಆ ತಾಣವನ್ನು ತಲುಪಿದಾಗ ಹಿರಿಯನಾಗರಿಕರು, "ಬೇಡಪ್ಪ ಅಲ್ಲಿಗೆ ಹೋಗಬೇಡ, ಬೆಟ್ಟ ಹತ್ತುವಾಗ ಆ ಜನರು ಕಲ್ಲುಬೀಸುತ್ತಾರೆ, ಪ್ರಾಣಾಪಾಯವೂ ಇದೆ" ಎಂದು ಎಚ್ಚರಿಸಿದರು. ಅಭೇದಾನಂದರು ಅದೊಂದನ್ನೂ ಕಿವಿಗೆ ಹಾಕಿಕೊಳ್ಳದೆ ಬೆಟ್ಟದ ಹಿಂಭಾಗದಿಂದ ಮೇಲೇರಿ ಬಳಿಕ ಅರಣ್ಯವನ್ನು ದಾಟುತ್ತಿದ್ದಂತೆ ಆ ಗವಿಯ ಬಾಗಿಲು ಸಿಕ್ಕಿಯೇ ಬಿಟ್ಟಿತು. ಆ ಯೋಗಿಗಳೆಲ್ಲ ಧುನಿ ಹತ್ತಿಸಿಕೊಂಡು, ಅದರ ಸುತ್ತ ಕುಳಿತು ಕಾಯಿಸಿಕೊಳ್ಳುತ್ತಿದ್ದರು. ಅವರೆಲ್ಲ ಅಭೇದಾನಂದರ ಮೇಲೆ ಎರಗಬೇಕೆನ್ನುವಷ್ಟರಲ್ಲಿ, "ಓಂ ನಮೋ ನಾರಾಯಣಾಯ" ಎಂದು ಹೇಳುತ್ತ ಅಡ್ಡಬಿದ್ದು ಅಪಾಯದಿಂದ ಪಾರಾದರು. ಕೆಲವೇ ದಿನಗಳಲ್ಲಿ ಆ ಯೋಗಿಗಳ ಬಳಿ ಯಾವ ಯೋಗರಹಸ್ಯವೂ ಇಲ್ಲ, ಅವರೆಲ್ಲ ಕೇವಲ ಢೋಂಗಿಗಳು ಎಂದು ಗೊತ್ತಾಯಿತು. ಅಲ್ಲಿಂದ ತಪ್ಪಿಸಿಕೊಂಡು ಬರುವುದು ಅಷ್ಟು ಸುಲಭವಾಗಿರಲಿಲ್ಲ. ಇದ್ದಕ್ಕಿದಂತೆ ಒಂದು ದಿನ ಮಧ್ಯಾಹ್ನ "ನೀರು ತರುತ್ತೇನೆ" ಎಂದು ಗವಿಯಿಂದ ತಪ್ಪಿಸಿಕೊಂಡು ಬಂದು, ಕೊಡವನ್ನು ತೂರಿ ಎಸೆದು ಓಟಕಿತ್ತರು. ಆಗ ಆ ಢೋಂಗಿಗಳು ಅಭೇದಾನಂದರ ಮೇಲೆ ಕಲ್ಲುಗಳ ಮಳೆಯನ್ನೆಲ್ಲ ಸುರಿಸಿದರು. ಸದ್ಯ, ಗುರುಕೃಪೆ ಚೆನ್ನಾಗಿತ್ತು, ಅಭೇದಾನಂದರು ಗಾಸಿಗೊಳ್ಳದೆ ಹೇಗೋ ಪಾರಾಗಿ ಊರಿಗೆ ಬಂದರು. ಎಲ್ಲವನ್ನೂ ಪರಮಹಂಸರಲ್ಲಿ ಅರಿಕೆಮಾಡಿಕೊಂಡರು. ಆಗ ಪರಮಹಂಸರು "ನಾನಿಲ್ಲಿರುವಾಗ ನೀನು ಎಲ್ಲೆಲ್ಲಿಯೋ ಹೋಗಿ ಸಂಕಟಪಡುವುದೇಕಪ್ಪಾ" ಎಂದು ಸೂಚ್ಯವಾಗಿ ಹೇಳಿ ಸುಮ್ಮನಾದರು.

ಅಭೇದಾನಂದರು ಕವಿಹೃದಯಸಂಪನ್ನರಾಗಿದ್ದರು. ಪರಮಹಂಸರನ್ನೂ ಶ್ರೀಮಾತೆಯವರನ್ನೂ ಕುರಿತಂತೆ ಕೆಲವು ಸ್ತೋತ್ರಗಳನ್ನು ಸಂಸ್ಕೃತದಲ್ಲಿ ರಚಿಸಿದ್ದರು. ಅವುಗಳನ್ನು ಶ್ರೀಮಾತೆಯವರ ಸಮ್ಮುಖದಲ್ಲಿ ಸಮರ್ಪಿಸಿದಾಗ ಅವರು "ವಿದ್ಯಾಭಿಮಾನಿದೇವತೆಯಾದ ಸರಸ್ವತಿಯು ನಿನ್ನ ನಾಲಗೆಯ ಮೇಲೆ ನಲಿದಾಡುತ್ತಿರಲಿ" ಎಂದು ಹರಸಿದರು. ಶ್ರೀಮಾತೆ ಯವರೊಡನೆ ವೃಂದಾವನಯಾತ್ರೆಗೆ ಹೋಗಿದ್ದಾಗ ಆ ಕ್ಷೇತ್ರದ 'ಪರಿಕ್ರಮ' ಮಾಡುವುದು ವಿಷ್ಣುಭಕ್ತರಿಗೆ ಅತ್ಯಂತ ಪ್ರಿಯವಾದ ವಿಚಾರ ಎಂಬ ಸಂಗತಿ ಅಭೇದಾನಂದರಿಗೆ ತಿಳಿಯಿತು. ಹಾಗೆ ತಿಳಿದುದೇ ಸರಿ, ಇನ್ನೂರಕ್ಕೂ ಹೆಚ್ಚು ಕಿಲೋಮೀಟರಷ್ಟು ದೂರಪ್ರಮಾಣವನ್ನು ಅವರು ಇಪ್ಪತ್ತೊಂದು ದಿನಗಳ ಕಾಲ ಪಟ್ಟುಹಿಡಿದು ವಿಧಿವತ್ತಾಗಿ ಸುತ್ತು ಹಾಕಿ ಗೆದ್ದುಬಂದರು.

ಅಭೇದಾನಂದರೂ ವಿವೇಕಾನಂದರೂ ಒಬ್ಬರಿಗೊಬ್ಬರು ಪಂಚಪ್ರಾಣವಾಗಿದ್ದರು. ವರಾಹನಗರ ಮಠದಲ್ಲಿದ್ದ ಕಾಲದಲ್ಲಿ "ಕಾಳಿಯು ಯಾವ ಕೆಲಸವನ್ನೂ ಮಾಡುವುದೇ ಇಲ್ಲ, ಅವನಿಗೆ ಜವಾಬ್ದಾರಿಯೆಂಬುದೇ ಇಲ್ಲ" ಎಂದು ಯಾರೋ ಗುರು ಭಾಯಿಗಳು ದೂರಿದರು. ಆಗ ವಿವೇಕಾನಂದರು "ನಮ್ಮಲ್ಲಿ ಒಬ್ಬನಾದರೂ ವಿದ್ವಾಂಸನಾಗಿ ಬೆಳೆಯಲಿ ಬಿಡಿ. ಪಾತ್ರೆ ತೊಳೆಯುವ ಕೆಲಸ ತಾನೆ, ಅದನ್ನು ನಾನೇ ಮಾಡುತ್ತೇನೆ" ಎಂದು ಅಭೇದಾನಂದರ ಪರವಾಗಿಯೇ ಮಾತನಾಡಿದರು. ೧೮೮೭ರ ಒಂದು ಶಿವರಾತ್ರಿಯಂದು ವಿವೇಕಾನಂದರು ತಮ್ಮ ಆಧ್ಯಾತ್ಮಿಕಶಕ್ತಿಯನ್ನು ಅಭೇದಾನಂದರೊಳಕ್ಕೆ ಹರಿಯಿಸಿ ಬಿಟ್ಟರು. ಆಗ ಅಭೇದಾನಂದರಿಗೆ ಯಾವುದೋ ವಿದ್ಯುತ್ ಪ್ರವಾಹ ತಮ್ಮೊಳಗೆ ಹರಿದು ಬರುತ್ತಿರುವಂತೆ ಭಾಸವಾಗಿ ಅವರ ಕೈಯೊಂದು ಗಡಗಡನೆ ನಡುಗುತ್ತಿತ್ತು. "ಆಸೆಗಳು ನಮ್ಮನ್ನು ಸುಟ್ಟುಹಾಕುತ್ತವೆ. ಅದಕ್ಕೆ ಮುನ್ನ ನಾವೇ ಅವುಗಳನ್ನು ಸುಟ್ಟುಹಾಕಿಬಿಡೋಣ" ಎಂದು ವಿವೇಕಾನಂದರೊಮ್ಮೆ ಹೇಳಿ ದಾಗ ಅಭೇದಾನಂದರೇ ಮೊದಲಾದ ಗುರುಭಾಯಿಗಳು, ವಿವೇಕಾನಂದರ ನೇತೃತ್ವದಲ್ಲಿ ಒಂದು ಧುನಿಯ ಸುತ್ತ ಧ್ಯಾನಸ್ಥ ರಾಗಿ ಕುಳಿತು, ಅವನ್ನೆಲ್ಲ ಧುನಿಗೆ ಹಾಕಿ ಸುಟ್ಟುಹಾಕಿಬಿಟ್ಟರು. ಆ ಸಂಗತಿಯನ್ನು ಅಭೇದಾನಂದರು ಪರಮಹಂಸರ ಮುಂದೆ ಅರಿಕೆಮಾಡಿಕೊಂಡಾಗ, ಆ ಸದ್ಗುರುವು ಹೊಟ್ಟೆಹುಣ್ಣಾಗುವಂತೆ ನಕ್ಕುನಲಿದರು.

**ಮಂಗಳವಾರ ಮೂಡಿದವರು ಶುಕ್ರವಾರ ಮುಳುಗಿದರು:** ಅಭೇದಾನಂದರು ಒಮ್ಮೆ ಡಾರ್ಜಿಲಿಂಗ್‌ನಿಂದ ಕೊಲ್ಕೊತ್ತೆಗೆ ರೈಲಿನಲ್ಲಿ ಪ್ರಯಾಣಿಸುತ್ತ ಬರುವಾಗ, ರೈಲು ಹಳಿತಪ್ಪಿ ಉರುಳಿಕೊಂಡು ಸ್ವಾಮಿಗಳು ಆಘಾತಕ್ಕೆ ತುತ್ತಾದರು. ಅದೇ ನೆಪವಾಗಿ ಅವರ ದೇಹಸ್ಥಿತಿ ಕೆಟ್ಟುಹೋಯಿತು. ಮುಂದಕ್ಕೆ ಅವರು ಜಲೋದರವೆಂದು ಕರೆಯುವ, ಹೊಟ್ಟೆಯಲ್ಲಿ ನೀರು ತುಂಬಿಕೊಳ್ಳುವ, ಕಠಿಣ ಕಾಯಿಲೆಗೆ ಗುರಿಯಾಗಿಬಿಟ್ಟರು. ಒಂದೂವರೆ ವರ್ಷ ಹಾಸುಗೆ ಹಿಡಿದು ಮಲಗಿಬಿಟ್ಟರು. ಆಗಲೂ ಶಿಷ್ಯರಿಗೆ ಮಾರ್ಗದರ್ಶನ ಮಾಡುವುದು, ತಮ್ಮ ಉಪನ್ಯಾಸಗಳನ್ನು ಶಿಷ್ಯರಿಂದ ಓದಿಸಿ ತಿದ್ದುವುದು – ಮುಂತಾದುವನ್ನು ಮಾಡುತ್ತಲೇ ಇದ್ದರು.